ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ – 1468(1681)
ಉತ್ತರಿಸಬೇಕಾದ ದಿನಾಂಕ – 19-03-2021
ಸದಸ್ಯರ ಹೆಸರು – ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ಸಚಿವರು – ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ರೂಪಿಸಿರುವ ಯೋಜನೆಗಳಾವುವು;	2020-21 ಸಾಲಿನಲ್ಲಿ ಹಮ್ಮಿಕೊಂಡಿರುವ ಯೋಜನೆಗಳು. 1. 'ವೃತ್ತಿ ಪ್ರೋತ್ಸಾಹ ಯೋಜನೆ' (ಪರಿಷ್ಕೃತ) 2. 'ಅರಿವು' (ವಿದ್ಯಾಭ್ಯಾಸ ಸಾಲ) ಸಾಲ ಯೋಜನೆ (ಪರಿಷ್ಕೃತ) 3. ಗಂಗಾ ಕಲ್ಯಾಣ ಯೋಜನೆ 4. 'ಶ್ರಮಶಕ್ತಿ' ಯೋಜನೆ 5. ಸಣ್ಣ (ಮೈಕ್ರೋ) ಸಾಲ ಮತ್ತು ಸಹಾಯಧನ ಯೋಜನೆ 6. ಮೈಕ್ರೋ ವೈಯುಕ್ತಿಕ (ಸಣ್ಣ) (ಕೋವಿಡ್-19) ಸಾಲ ಯೋಜನೆ 7. ಗೃಹ ನಿರ್ಮಾಣ-ಮಾರ್ಜಿನ್ ಹಣ ಸಾಲ ಯೋಜನೆ 8. ಪಶುಸಂಗೋಪನೆ ಯೋಜನೆ 9. ಟ್ಯಾಕ್ಸಿ/ಗೂಡ್ಸ್ ವಾಹನ ಖರೀದಿಸಲು ಸಹಾಯಧನ ಯೋಜನೆ (ಪರಿಷ್ಕೃತ) 10. ಅಲ್ಪಸಂಖ್ಯಾತರ ರೈತರ ಕಲ್ಯಾಣ ಯೋಜನೆ 11. "ಆಟೋ ಮೊಬೈಲ್ ಸರ್ವಿಸ್, ಬಿದರಿ ಮತ್ತು ರೇಷ್ಮೆ, ಚನ್ನಪಟ್ಟಣ ಕರಕುಶಲ ಚಟುವಟಿಕೆಗಳಿಗೆ ತರಬೇತಿ ಪ್ರೋತ್ಸಾಹ ಹಾಗೂ ಸಾಲ ಮತ್ತು ಸಹಾಯಧನ ಹಾಗೂ ಮೂಲಭೂತ ಸೌಕರ್ಯ ನೀಡಲಾಗುವುದು". 12. ಮನೆ ಮಳಿಗೆ ಯೋಜನೆ.
ಆ)	ಯೋಜನೆಗಳಿಗೆ ಇರುವ ಮಾನದಂಡಗಳೇನು? (ಸಂಪೂರ್ಣ ವಿವರ ನೀಡುವುದು)	ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

MWD 129 LMQ 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ
ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಜಾರಿಗೊಳಿಸಲಾಗುತ್ತಿರು ಯೋಜನೆ/ಕಾರ್ಯಕ್ರಮಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಅನುಸರಿಸಲಾಗುತ್ತಿರುವ ಮಾನದಂಡಗಳ ಮಾಹಿತಿ

<table>
<tr><th colspan="3">ಮಾನ್ಯ ವಿಧಾನಸಭಾ ಶಾಸಕರ ಅಧ್ಯಕ್ಷತೆಯ ಆಯ್ಕೆ ಸಮಿತಿಯ ಮೂಲಕ ಫಲಾನುಭವಿಗಳ ಆಯ್ಕೆ</th></tr>
<tr><th>ಕ್ರ. ಸಂ</th><th>ಯೋಜನೆಯ ಹೆಸರು</th><th>ಅನುಸರಿಸಬೇಕಾದ ಮಾನದಂಡಗಳು</th></tr>
<tr><td>1</td><td>ಸ್ವಯಂ ಉದ್ಯೋಗ ಯೋಜನೆ</td><td rowspan="4">1. ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
2. ಆರ್ಥಿಕ ನೆರವು ಪಡೆಯಲಿಚ್ಚಿಸುವ ಅರ್ಜಿದಾರರು ಸರ್ಕಾರವು ಅಂಗೀಕರಿಸಿದ ಮತೀಯ ಅಲ್ಪಸಂಖ್ಯಾತ ವರ್ಗಗಳ ಗುಂಪಿಗೆ ಸೇರಿದವರಾಗಿರಬೇಕು
3. ಅರ್ಜಿದಾರರ ಕುಟುಂಬದ ಎಲ್ಲಾ ಮೂಲಗಳಿಂದ ವಾರ್ಷಿಕ ಆದಾಯ ಗ್ರಾಮಾಂತರ ಪ್ರದೇಶದವರಿಗೆ ರೂ.81,000/- ಮತ್ತು ನಗರ ಪ್ರದೇಶದವರಿಗೆ ರೂ.1,03,000/- ಮೀರಿರಬಾರದು
4. ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಮತ್ತು ಗರಿಷ್ಠ 55ವರ್ಷಗಳು.
5. ಅರ್ಜಿದಾರರ ತಮ್ಮ ವಿಳಾಸದ ದೃಢೀಕರಣಕ್ಕಾಗಿ ಆಧಾರ್ (UID) ಪ್ರತಿಯನ್ನು ಲಗತ್ತಿಸಿ, ಅದನ್ನು ಅವರ ಬ್ಯಾಂಕ್ ಖಾತೆಗೆ ಜೋಡನೆ (ಲಿಂಕ್) ಮಾಡಿರಬೇಕು ಮತ್ತು ಇತರೆ ಮಾನ್ಯವಾಗಿರುವ ದಾಖಲಾತಿಗಳು ಸಲ್ಲಿಸಬೇಕು.
6. ನಿಗಮದ ಎಲ್ಲಾ ಯೋಜನೆಗಳಲ್ಲಿ 80:10:10 ಅನುಪಾತದಲ್ಲಿ ಅಂದರೆ ಶೇಕಡ 80 ರಷ್ಟು ಮುಸ್ಲಿಂ ಶೇಕಡ 10 ರಷ್ಟು ಕ್ರೈಸ್ತರು ಹಾಗೂ ಶೇಕಡ 10 ರಷ್ಟು ಇತರೆ (ಜೈನರು, ಬೌದ್ಧರು, ಸಿಖ್ಖರು ಮತ್ತು ಪಾರ್ಸಿ) ಜನಾಂಗದವರುಗಳಿಗೆ ಸೌಲಭ್ಯವನ್ನು ಒದಗಿಸುವ ಕ್ರಮ ತೆಗೆದುಕೊಳ್ಳ ಬೇಕು
7. ನಿಗಮದ ಎಲ್ಲಾಯೋಜನೆಗಳಲ್ಲಿ ಮಹಿಳೆಯರಿಗೆ ಕನಿಷ್ಠ ಶೇಕಡ 33 ರಷ್ಟು ಆದ್ಯತೆ ತಪ್ಪದೆ ಒದಗಿಸ ಬೇಕು.
8. ಎಲ್ಲಾ ಯೋಜನೆಗಳಲ್ಲಿ ಅಂಗವಿಕಲರಿಗೆ ಹಾಗೂ ಮಾಜಿ ಸೈನಿಕರಿಗೆ ಶೇಕಡ 5 ರಷ್ಟು ಗುರಿಯನ್ನು ಆದ್ಯತೆ ಒದಗಿಸ ಬೇಕು.
9. ಗಂಗಾ ಕಲ್ಯಾಣ ಯೋಜನೆಗೆ
ಸಣ್ಣ ಮತ್ತು ಅತಿ ಸಣ್ಣ ರೈತರಾಗಿರಬೇಕು ಅಂದರೆ ಪ್ರತಿ ಫಲಾನುಭವಿಗೆ 1ಎಕರೆ 20 ಗುಂಟೆ ಯಿಂದ 5 ಎಕರೆಯವರೆಗೆ ಕುಷ್ಕಿ ಜಮೀನು ಹೊಂದಿರಬೇಕು ಮತ್ತು ವ್ಯವಸಾಯ ವೃತ್ತಿಯನ್ನೇ ಅವಲಂಬಿಸಿರಬೇಕು, ಸಣ್ಣ ಮತ್ತು ಅತಿ ಸಣ್ಣ ರೈತರ ದೃಡಿಕರಣ ಪತ್ರ, ಕೃಷಿ ಜಮೀನಿನ ಯಾವುದೇ ನೀರಾವರಿ ಮೂಲ ಇಲ್ಲದಿರುವ ಬಗ್ಗೆ ದೃಡಿಕರಣ ಪತ್ರ, ಭೂಮಿಯ ಚಕ್ಕಬಂದಿ ಮತ್ತು ನಕಾಶೆ, ಪಹಣಿ, ರೆರ್ಕಾರ್ಡ್ ಆಫ್ ರೈಟ್ಸ್ ಸಲ್ಲಿಸಬೇಕು. ಸರ್ಕಾರಿ ಆದೇಶ ಸಂಖ್ಯೆ:ಸಕಇ 168 ಬಿಎಮ್ಎಸ್2010 ದಿನಾಂಕ 25-07-2011ರಲ್ಲಿ ಸೂಚಿಸಿರುವಂತೆ ಮಡಿಕೇರಿ, ಮಂಗಳೂರು, ಉಡುಪಿ, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಇಂತಹ ಜಿಲ್ಲೆಗಳಲ್ಲಿ ಜಮೀನನ ಲಭ್ಯತೆ ಬಹಳ ಕಡಿಮೆ ಇರುವುದರಿಂದ ಗರಿಷ್ಠ 1 ಎಕರೆ ಜಮೀನ್ನು ಹೊಂದಿರತಕ್ಕದ್ದು.</td></tr>
<tr><td>2</td><td>ಶ್ರಮಶಕ್ತಿ ಯೋಜನೆ</td></tr>
<tr><td>3</td><td>ಮೈಕ್ರೋ ಸಾಲ ಮತ್ತು ಸಹಾಯಧನ ಯೋಜನೆ</td></tr>
<tr><td>4</td><td>ಗಂಗಾ ಕಲ್ಯಾಣ ಯೋಜನೆ</td></tr>
</table>

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಜಾರಿಗೊಳಿಸಲಾಗುತ್ತಿರು ಯೋಜನೆ/ಕಾರ್ಯಕ್ರಮಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಅನುಸರಿಸಲಾಗುತ್ತಿರುವ ಮಾನದಂಡಗಳ ಮಾಹಿತಿ

<table>
<tr><th colspan="3">ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿಯ ಮೂಲಕ ಫಲಾನುಭವಿಗಳ ಆಯ್ಕೆ</th></tr>
<tr><th>ಕ್ರ. ಸಂ</th><th>ಯೋಜನೆಯ ಹೆಸರು</th><th>ಅನುಸರಿಸಬೇಕಾದ ಮಾನದಂಡಗಳು</th></tr>
<tr><td>1</td><td>ಆಟೋ ಮೊಬೈಲ್ ಸರ್ವಿಸ್, ಬಿದರಿ ಮತ್ತು ರೇಷ್ಮೆ, ಚನ್ನಪಟ್ಟಣ ಕರಕುಶಲ ಚಟುವಟಿಕೆಗಳಿಗೆ ತರಬೇತಿ ಹಾಗೂ ಸಾಲ ಸೌಲಭ್ಯ</td><td rowspan="4">1. ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
2. ಆರ್ಥಿಕ ನೆರವು ಪಡೆಯಲಿಚ್ಚಿಸುವ ಅರ್ಜಿದಾರರು ಸರ್ಕಾರವು ಅಂಗೀಕರಿಸಿದ ಮತೀಯ ಅಲ್ಪಸಂಖ್ಯಾತ ವರ್ಗಗಳ ಗುಂಪಿಗೆ ಸೇರಿದವರಾಗಿರಬೇಕು
3. ಅರ್ಜಿದಾರರ ಕುಟುಂಬದ ಎಲ್ಲಾ ಮೂಲಗಳಿಂದ ವಾರ್ಷಿಕ ಆದಾಯ ಗ್ರಾಮಾಂತರ ಪ್ರದೇಶದವರಿಗೆ ರೂ.81,000/- ಮತ್ತು ನಗರ ಪ್ರದೇಶದವರಿಗೆ ರೂ.1,03,000/- ಮೀರಿರಬಾರದು (ಆಟೋ ಮೊಬೈಲ್ ಸರ್ವಿಸ್, ಬಿದರಿ ಮತ್ತು ರೇಷ್ಮೆ, ಚನ್ನಪಟ್ಟಣ ಕರಕುಶಲ ಚಟುವಟಿಕೆಗಳಿಗೆ ತರಬೇತಿ ಹಾಗೂ ಸಾಲ ಸೌಲಭ್ಯ ಮತ್ತು ಮನ ಮಳಿಗೆ ಯೋಜನೆಗೆ ರೂ.6.00 ಲಕ್ಷಗಳು)
4. ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಮತ್ತು ಗರಿಷ್ಠ 55ವರ್ಷಗಳು.
5. ಅರ್ಜಿದಾರರ ತಮ್ಮ ವಿಳಾಸದ ದೃಢೀಕರಣಕ್ಕಾಗಿ ಆಧಾರ್ (UID) ಪ್ರತಿಯನ್ನು ಲಗತ್ತಿಸಿ, ಅದನ್ನು ಅವರ ಬ್ಯಾಂಕ್ ಖಾತೆಗೆ ಜೋಡನೆ (ಲಿಂಕ್) ಮಾಡಿರಬೇಕು ಮತ್ತು ಇತರೆ ಮಾನ್ಯವಾಗಿರುವ ದಾಖಲಾತಿಗಳು ಸಲ್ಲಿಸಬೇಕು.
6. ನಿಗಮದ ಎಲ್ಲಾ ಯೋಜನೆಗಳಲ್ಲಿ 80:10:10 ಅನುಪಾತದಲ್ಲಿ ಅಂದರೆ ಶೇಕಡ 80 ರಷ್ಟು ಮುಸ್ಲಿಂ ಶೇಕಡ 10 ರಷ್ಟು ಕ್ರೈಸ್ತರು ಹಾಗೂ ಶೇಕಡ 10 ರಷ್ಟು ಇತರೆ (ಜೈನರು, ಬೌದ್ಧರು, ಸಿಖ್ಖರು ಮತ್ತು ಪಾರ್ಸಿ) ಜನಾಂಗದವರುಗಳಿಗೆ ಸೌಲಭ್ಯವನ್ನು ಒದಗಿಸುವ ಕ್ರಮ ತೆಗೆದುಕೊಳ್ಳ ಬೇಕು
7. ನಿಗಮದ ಎಲ್ಲಾಯೋಜನೆಗಳಲ್ಲಿ ಮಹಿಳೆಯರಿಗೆ ಕನಿಷ್ಠ ಶೇಕಡ 33 ರಷ್ಟು ಆದ್ಯತೆ ತಪ್ಪದೆ ಒದಗಿಸ ಬೇಕು.
8. ಎಲ್ಲಾ ಯೋಜನೆಗಳಲ್ಲಿ ಅಂಗವಿಕಲರಿಗೆ ಹಾಗೂ ಮಾಜಿ ಸೈನಿಕರಿಗೆ ಶೇಕಡ 5 ರಷ್ಟು ಗುರಿಯನ್ನು ಆದ್ಯತೆ ಒದಗಿಸ ಬೇಕು.</td></tr>
<tr><td>2</td><td>ವೃತ್ತಿ ಪ್ರೋತ್ಸಾಹ ಯೋಜನೆ</td></tr>
<tr><td>3</td><td>ಗೃಹ ನಿರ್ಮಾಣ- ಮಾರ್ಜಿನ್ ಹಣ ಸಾಲ ಯೋಜನೆ</td></tr>
<tr><td>4</td><td>ಮನೆ ಮಳಿಗೆ ಯೋಜನೆ</td></tr>
</table>

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಜಾರಿಗೊಳಿಸಲಾಗುತ್ತಿರು ಯೋಜನೆ/ಕಾರ್ಯಕ್ರಮಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಅನುಸರಿಸಲಾಗುತ್ತಿರುವ ಮಾನದಂಡಗಳ ಮಾಹಿತಿ

<table>
<tr><th colspan="3">ಮಾನ್ಯ ಜಿಲ್ಲಾಧಿಕಾರಿಗಳ ಆಧ್ಯಕ್ಷತೆಯ ಆಯ್ಕೆ ಸಮಿತಿಯ ಮೂಲಕ ಫಲಾನುಭವಿಗಳ ಆಯ್ಕೆ</th></tr>
<tr><th>ಕ್ರ. ಸಂ</th><th>ಯೋಜನೆಯ ಹೆಸರು</th><th>ಅನುಸರಿಸಬೇಕಾದ ಮಾನದಂಡಗಳು</th></tr>
<tr><td>1</td><td>ಭೂ ಖರೀದಿ ಯೋಜನೆ</td><td rowspan="4">1. ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
2. ಆರ್ಥಿಕ ನೆರವು ಪಡೆಯಲಿಚ್ಚಿಸುವ ಅರ್ಜಿದಾರರು ಸರ್ಕಾರವು ಅಂಗೀಕರಿಸಿದ ಮತೀಯ ಅಲ್ಪಸಂಖ್ಯಾತ ವರ್ಗಗಳ ಗುಂಪಿಗೆ ಸೇರಿದವರಾಗಿರಬೇಕು
3. ಅರ್ಜಿದಾರರ ಕುಟುಂಬದ ಎಲ್ಲಾ ಮೂಲಗಳಿಂದ ವಾರ್ಷಿಕ ಆದಾಯ ರೂ.81,000/–(ಪಶುಸಂಗೋಪನೆ ಯೋಜನೆ ರೂ.1,03,000/),(ರೈತರ ಕಲ್ಯಾಣ ಯೋಜನೆಹಾಗೂ ಟ್ಯಾಕ್ಸಿ/ಗೂಡ್ಸ್ ರೂ.4.50ಲಕ್ಷ) ಮೀರಿರಬಾರದು
4. ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಮತ್ತು ಗರಿಷ್ಠ 55ವರ್ಷಗಳು.
5. (ಗರಿಷ್ಠ 45 ವರ್ಷಗಳು ರೈತರ ಕಲ್ಯಾಣ ಯೋಜನೆ, ಪಶುಸಂಗೋಪನೆ ಹಾಗೂ ಟ್ಯಾಕ್ಸಿ/ಗೂಡ್ಸ್ ವಾಹನ ಖರೀದಿ ಯೋಜನೆಗೆ)
6. ಅರ್ಜಿದಾರರ ತಮ್ಮ ವಿಳಾಸದ ದೃಢೀಕರಣಕ್ಕಾಗಿ ಆಧಾರ್ (UID) ಪ್ರತಿಯನ್ನು ಲಗತ್ತಿಸಿ, ಅದನ್ನು ಅವರ ಬ್ಯಾಂಕ್ ಖಾತೆಗೆ ಜೋಡನೆ (ಲಿಂಕ್) ಮಾಡಿರಬೇಕು ಮತ್ತು ಇತರೆ ಮಾನ್ಯವಾಗಿರುವ ದಾಖಲಾತಿಗಳು ಸಲ್ಲಿಸಬೇಕು.
7. ನಿಗಮದ ಎಲ್ಲಾ ಯೋಜನೆಗಳಲ್ಲಿ 80:10:10 ಅನುಪಾತದಲ್ಲಿ ಅಂದರೆ ಶೇಕಡ 80 ರಷ್ಟು ಮುಸ್ಲಿಂ ಶೇಕಡ 10 ರಷ್ಟು ಕ್ರೈಸ್ತರು ಹಾಗೂ ಶೇಕಡ 10 ರಷ್ಟು ಇತರೆ (ಜೈನರು, ಬೌದ್ಧರು, ಸಿಖ್ಖರು ಮತ್ತು ಪಾರ್ಸಿ) ಜನಾಂಗದವರುಗಳಿಗೆ ಸೌಲಭ್ಯವನ್ನು ಒದಗಿಸುವ ಕ್ರಮ ತೆಗೆದುಕೊಳ್ಳ ಬೇಕು
8. ನಿಗಮದ ಎಲ್ಲಾಯೋಜನೆಗಳಲ್ಲಿ ಮಹಿಳೆಯರಿಗೆ ಕನಿಷ್ಠ ಶೇಕಡ 33 ರಷ್ಟು ಆದ್ಯತೆ ತಪ್ಪದೆ ಒದಗಿಸ ಬೇಕು.
9. ಎಲ್ಲಾ ಯೋಜನೆಗಳಲ್ಲಿ ಅಂಗವಿಕಲರಿಗೆ ಹಾಗೂ ಮಾಜಿ ಸೈನಿಕರಿಗೆ ಶೇಕಡ 5ರಷ್ಟು ಗುರಿಯನ್ನು ಆದ್ಯತೆ ಒದಗಿಸ ಬೇಕು.
10.ಟ್ಯಾಕ್ಸಿ/ಗೂಡ್ಸ್ ವಾಹನ ಖರೀದಿ ಯೋಜನೆಯಲ್ಲಿ Driving License ಮತ್ತು Badge ಹೊಂದಿರತಕ್ಕದ್ದು.</td></tr>
<tr><td>2</td><td>ಅಲ್ಪಸಂಖ್ಯಾತರ ರೈತರ ಕಲ್ಯಾಣ ಯೋಜನೆ</td></tr>
<tr><td>3</td><td>ಪಶುಸಂಗೋಪನೆ ಯೋಜನೆ</td></tr>
<tr><td>4</td><td>ಟ್ಯಾಕ್ಸಿ/ಗೂಡ್ಸ್ ವಾಹನ ಖರೀದಿ ಸಹಾಯಧನ ಯೋಜನೆ</td></tr>
</table>